ಚರಿತ್ರೆಯೇ ಮುಳುವಾಗುತ್ತಿದೆಯಲ್ಲ ಎನ್ನುವ ನೋವು ಬಾಧಿಸುತ್ತಲೇ ಇತ್ತು. 'ನನ್ನಿಂದಾಗಿಯೇ ನಿನ್ನ ಬದುಕು ಹಾಳಾಗ್ತಾ ಇದೆಯಲ್ಲ ಮಗೂ...' ಎಂದು ತನ್ನಷ್ಟಕ್ಕೇ ಹೇಳಿಕೊಂಡು ಅಳುತ್ತಿದ್ದಳು.

ಅಮ್ಮ ಪ್ರಕಟವಾಗಿ ಏನನ್ನೂ ಹೇಳದಿದ್ದರೂ ಅವಳ ಅಳುವಿನ ಆಳ ತಿಳಿದಿದ್ದ ಮಗ ಆಕೆಯನ್ನು ಕೆದಕುತ್ತಿರಲಿಲ್ಲ. ತನ್ನನ್ನು ಬೆಳೆಸಲು ಹೆಜ್ಜೆ ಹೆಜ್ಜೆಗೂ ಆಕೆ ಪಟ್ಟಿದ್ದ ಕಷ್ಟದ ಅರಿವಿದ್ದ ಅವನಿಗೆ ಅಮ್ಮನನ್ನು ಕೆದಕಿ ಕೇಳಬೇಕೆಂದು ಅನ್ನಿಸುತ್ತಿರಲೂ ಇಲ್ಲ. ಅದು ಬೇರೆ ಶಾಲೆಗೆ ಹೋಗುತ್ತಿದ್ದ ದಿನಗಳಲ್ಲಿ ಒಂದೆರಡು ಬಾರಿ ಕೆದಕಿ ಕೇಳಲು ಹೋದಾಗ ಉತ್ತರಿಸಲಾಗದ ಅಮ್ಮ ಪಟ್ಟ ಸಂಕಟವನ್ನು ಕಂಡ ಅವ ಅಮ್ಮನಿಗೆ ದುಃಖ ಕೊಡುವಂತಹ ಅಂತಹ ವಿಚಾರಗಳನ್ನು ಅವಳೊಂದಿಗೆ ಎಂದಿಗೂ ಕೇಳಲೇಬಾರದು ಎಂದು ಆಗಲೇ ನಿರ್ಧರಿಸಿದ್ದ. ಹಾಗೆಯೇ ಈಗ 'ನೀನು ಸುಮ್ಮನಿರಮ್ಮ, ಏನಾದರೂ ಆಗಬೇಕೆಂದಿದ್ದರೆ ಆಗುವ ಕಾಲಕ್ಕೆ ಆಗಿಯೇ ಆಗುತ್ತದೆ' ಎಂದ. ಒಗಟಿನಂತಿದ್ದ ಮಗನ ಮಾತನ್ನು ಕೇಳಿದ ತಾಯಿ ಮಗನ ಮುಖವನ್ನು ನೋಡಿದಳು.

★★★

ಅಂದೇ ಸಂಜೆ ಮನೆಗೆ ಬರುವಾಗ ಜೊತೆಯಲ್ಲಿ ಒಬ್ಬ ಹುಡುಗಿಯನ್ನು ಕರೆತಂದಿದ್ದ ಮಗ. ಉದ್ದಕ್ಕೂ ಮಗನ ಕಾರಿನ ಮೂಲೆಯಲ್ಲಿ ಮುದ್ದೆಯಾಗಿ ಕುಳಿತಿದ್ದ ಅವಳು ತಗ್ಗಿಸಿದ ತಲೆಯನ್ನು ಎತ್ತದೆಯೇ ಒಳ ಬಂದಿದ್ದಳು. ಒಗಟಿನಂತಿದ್ದ ಮಗನ ಬೆಳಿಗ್ಗಿನ ಮಾತಿನಿಂದ ಹೊರಬರಲು ಇನ್ನೂ ಪ್ರಯತ್ನಪಡುತ್ತಿದ್ದ ಅಮ್ಮನಿಗೆ ಈಗ ಆಶ್ಚರ್ಯ.

ಯಾವುದೇ ಪೀಠಿಕೆಯಿಲ್ಲದೆ ಅವ ಹೇಳಿದ್ದ. 'ಇವಳ ಹೆಸರು ಚಾಂದನಿ. ಜಾತಿ ಯಾವುದೆಂದು ಕೇಳಬೇಡ. ಹೆಣ್ಣು ಜಾತಿ ಅಷ್ಟೆ. ನಮ್ಮ ಆಫೀಸಿನ ಹಿಂದುಗಡೆ ಇರುವ ಅನಾಥಾಶ್ರಮಕ್ಕೆ ಬಂದು ಎರಡು ತಿಂಗಳುಗಳೇ ಕಳೆದುವು. ಬಂದ ಎಂಟು ದಿನಕ್ಕೇ ನಮ್ಮಲ್ಲಿಗೆ ಕೆಲಸ ಕೇಳಿಕೊಂಡು ಬಂದಿದ್ದಳು. ಜೊತೆಯಲ್ಲಿಯೇ ಅನಾಥಾಶ್ರಮದ ಆಡಳಿತದವರೂ ಇದ್ದರು. ಆಕೆಯ ವಿದ್ಯಾರ್ಹತೆಗೆ ನಮ್ಮಲ್ಲಿ ಆಫೀಸನ್ನು ಗುಡಿಸುವ ಕೆಲಸ ಕೊಡಬಹುದಿತ್ತಷ್ಟೆ... ಆದರೆ ಆ ಕೆಲಸವೂ ಬೇರೆ ಒಂದು ಕಂಪನಿಯವರಿಗೆ ಆಗಿ ಹೋಗಿತ್ತಾದ್ದರಿಂದ ಆಗುವುದಿಲ್ಲ ಎಂದು ಹೇಳಿದೆ. ಆಗ ತಲೆ ಅಲ್ಲಾಡಿಸುತ್ತ ಹೋದವಳು ಇಂದು ಸಂಜೆ ನಾನು ಕಾರು ಹತ್ತುವಾಗ ಓಡಿ ಬಂದು ಬೇಡಿಕೊಳ್ಳಲು ತೊಡಗಿದಳು. ಕಾರಲ್ಲಿ ಕುಳಿತುಕೊಳ್ಳಲು ಹೇಳಿ ಇಲ್ಲಿಗೆ ಕರೆತಂದಿದ್ದೇನೆ. ದಾರಿಯುದ್ದಕ್ಕೂ ಮಾತಾಡಿದ್ದೇನೆ.'

'ಗುಲ್ಬರ್ಗದ ಹತ್ತಿರ ಯಾವುದೋ ಹಳ್ಳಿಯವಳು. ಇವಳಮ್ಮ ಒಬ್ಬಳು ದೇವದಾಸಿಯಂತೆ.'

'ದೇವದಾಸಿಯೆಂದರೆ ನಿನಗೆ ಗೊತ್ತಿದೆ' ಎಂದರೆ ಆ ತಾಯಿ 'ಹೌದು' ಎಂಬಂತೆ ತಲೆ ಅಲ್ಲಾಡಿಸಿದ್ದಳು.

ಇವಳು ಪ್ರಾಯಕ್ಕೆ ಬರುವ ಮುಂಚೆಯೇ ಇವಳನ್ನು ತನ್ನಂತೆಯೇ ಆಗಬೇಕೆಂದು ಒತ್ತಾಯಿಸುತ್ತಿದ್ದ ಆ ತಾಯಿ ಇವಳು ಬೇಡ ಬೇಡ ಎಂದರೂ ಕೇಳದೆ ದೊಡ್ಡವಳಾದ ಕೂಡಲೇ ಊರಿಗೇ ದೊಡ್ಡ ಮನುಷ್ಯ ಎಂದು ಹೇಳಿಕೊಳ್ಳುತ್ತಿದ್ದವರೊಬ್ಬರನ್ನು ಮನೆಗೇ ಕರೆದುಕೊಂಡು ಬಂದಿದ್ದಳು. ಆ ಬಲಿಷ್ಠ ಮನುಷ್ಯನ ಕೈಯಿಂದ ತಪ್ಪಿಸಿಕೊಳ್ಳಲಾರದೇ ಅವನಿಗೆ ವಶವಾದದ್ದು ಮತ್ತು ತಿಂಗಳುಗಟ್ಟಲೆ ಅದೇ ಮುಂದುವರಿದದ್ದು. ಒಂದು ದಿನ ಇದ್ದ ಬದ್ದ ಧೈರ್ಯವನ್ನೆಲ್ಲ ಸೇರಿಸಿ ಕುಡಿದ ಅಮಲಿನಲ್ಲಿದ್ದ ಅವನನ್ನು ಮುರುಕಲು ಮಂಚದ ಮೇಲೆ ತಳ್ಳಿ ಅವನ ಜೇಬಿನಲ್ಲಿದ್ದ ಅದೆಷ್ಟೋ ಹಣವನ್ನು ಬಾಚಿಕೊಂಡು ರಾತ್ರೋ ರಾತ್ರಿ ಮನೆ ಮತ್ತು ಊರು ಬಿಟ್ಟು ಹೊರಟವಳು ಯಾವು ಯಾವುದೋ ಊರಿನಲ್ಲಿ ಯಾವು ಯಾವುದೋ ಆಶ್ರಮಗಳಲ್ಲಿ ಯಾರು ಯಾರದೋ ಅರಮನೆಗಳಂತಹ ಮನೆಗಳಲ್ಲಿ ಉಳಿದು ದಿನ ಕಳೆದದ್ದು. ಎಲ್ಲೂ ತಿಂಗಳು, ಎರಡು ತಿಂಗಳ ಮೇಲೆ ಇರಲಿಕ್ಕೆ ಸಾಧ್ಯವಾಗದೆ ಬೇರೆ ಕಡೆ ಹುಡುಕಿಕೊಂಡು ಹೋದದ್ದು. ಅದರಲ್ಲೂ ಕೊನೆಯದಾಗಿ ಇದ್ದ ಸನ್ಯಾಸಿನಿಯರ ಆಶ್ರಮದಲ್ಲಿನ